# ಹೆಣ್ಣು ಹೆತ್ತಿದ್ದೇ ತಪ್ಪೆಂದು ಪತಿ ದೂರ

## ಚೈತ್ರಾ ಸಕ್ಕರೆ

ಸ್ಟಾರ್ ಸುವರ್ಣದ 'ಶಾರದೆ'ಯ ಶಾರದಾ



◆ **ನಿಮ್ಮ ಪರಿಚಯ ಹೇಳಬಹುದಾ?**

ಗೋಳಗುಮ್ಮಟ ಖ್ಯಾತಿಯ ವಿಜಯಪುರ ಮೂಲದವಳು. ಬೆಂಗಳೂರಿನಲ್ಲೇ ಬೆಳೆದೆ. 'ಕುಣಿಯೋಣು ಬಾರಾ' ರಿಯಾಲಿಟಿ ಶೋನಲ್ಲಿ ಸ್ಪರ್ಧಿಸಿದ್ದೆ. ಅದು ಇಲ್ಲಿಯವರೆಗೂ ತಂದಿದೆ. ನನಗೂ ಡಾನ್ಸ್‌ಗೂ ಏನೋ ಒಂದು ನಂಟಿದೆ. ನಾನು ಪೂರ್ವಪ್ರಾಥಮಿಕ ಶಾಲೆಯಲ್ಲಿದ್ದಾಗಲೇ ಚಂದನದಲ್ಲಿ ಯಾವುದೋ ಒಂದು ಹಾಡಿಗೆ ಗ್ರೂಪ್ ಡಾನ್ಸಿಗೆ ಹೆಜ್ಜೆ ಹಾಕಿದ್ದೆ. ಅದು ಏನೆಂದೂ ಈಗಲೂ ಗೊತ್ತಿಲ್ಲ, ಆಗ ಕೂಡ ಗೊತ್ತಿರಲಿಲ್ಲ. ಡಾನ್ಸ್ ಮೇಲೆ ಇರುವ ನನ್ನ ಆಸಕ್ತಿಯನ್ನು ಕಂಡು ಮನೆಯವರು ಪಾಶ್ಚಿಮಾತ್ಯ ಡಾನ್ಸ್ ಕ್ಲಾಸ್‌ಗೆ ಸೇರಿಸಿದರು. ಬಿಕಾಂ ಓದಿದ್ದೇನೆ. ಈಗ ನಟನೆಯೇ ಜೀವನ ಎಂದು ಭಾವಿಸಿದ್ದೇನೆ.

◆ **ಡಾನ್ಸರ್ ನಟನೆಗೆ ಬಂದಿದ್ದಾದರೂ ಹೇಗೆ?**

ಚಿಕ್ಕವಯಸ್ಸಿನಿಂದಲೂ ನಟನೆಗೆ ಬರಬೇಕು ಎನ್ನುವ ಆಸೆ ಇತ್ತು. ಆದರೆ ಸೀರಿಯಲ್‌ಗೆ ಬರುತ್ತೇನೆ ಎಂದು ಭಾವಿಸಿರಲಿಲ್ಲ. ನಾನು ನನ್ನ ಗೆಳತಿ ಯೂಟ್ಯೂಬ್‌ಗೆ ಒಂದು ಡಾನ್ಸ್ ಮಾಡಿದ್ದೆವು. ಅದೂ ತಮಿಳು ಹಾಡಿಗೆ. ಅದನ್ನು ನೋಡಿದ ಕಾಸ್ಟಿಂಗ್ ಹೌಸ್‌ನವರು ಆಹ್ವಾನಿಸಿದರು. ಅವರು ನಟ–ನಟಿಯರನ್ನು ನಿರ್ಮಾಣ ಸಂಸ್ಥೆಗೆ ಪರಿಚಯಿಸುತ್ತಾರೆ. ನನಗೆ ಸಿನಿಮಾ ಮಾಡುವ ಅಪೇಕ್ಷೆ ಇತ್ತು. ಆದರೆ 'ತಮಿಳ್ ಸೆಲ್ವಿ' ತಮಿಳು ಸೀರಿಯಲ್‌ನಲ್ಲಿ ನಿರಾಯಾಸವಾಗಿ ಅವಕಾಶ ಸಿಕ್ಕಿದ್ದರಿಂದ ಅದನ್ನು ನಿರ್ವಹಿಸಿದೆ. ಕೆಲವೇ ತಿಂಗಳಲ್ಲಿ ಮೊದಲ ಲಾಕ್‌ಡೌನ್ ಆಯಿತು. ಅನಿವಾರ್ಯವಾಗಿ ನಿಂತಿತು. ಅದಾದ ಮೇಲೆ ಉದಯದ 'ನಯನಾ ತಾರಾ'ದಲ್ಲಿ ಅವಕಾಶ ಸಿಕ್ಕಿತು. ಅಲ್ಲಿಂದ ನಟನೆಯನ್ನೇ ಮುಂದುವರಿಸುತ್ತಿದ್ದೇನೆ.

ಡಾನ್ಸ್ ಕಲಿಯುತ್ತಿದ್ದಾಗಲೇ ಅನೇಕ ಸಾರ್ವಜನಿಕ ಕಾರ್ಯಕ್ರಮಗಳನ್ನು ನೀಡಿದ್ದೇನೆ. ಅಣ್ಣಮ್ಮನ ಹಬ್ಬ ಇರಬಹುದು, ಗಣೇಶೋತ್ಸವ, ರಾಜ್ಯೋತ್ಸವದಲ್ಲೂ ಕಾರ್ಯಕ್ರಮ ನೀಡಿದ್ದೇನೆ. ಯಾವುದೋ ಪ್ರದರ್ಶನದಲ್ಲಿ 'ಕುಣಿಯೋಣು ಬಾರಾ' ತಂಡದವರು ನನ್ನ ಡಾನ್ಸ್ ನೋಡಿದ್ದಾರೆ. ಕೆಲ ದಿನ ಕಳೆದ ನಂತರ ನಾನು 'ಕುಣಿಯೋಣು ಬಾರಾ' ರಿಯಾಲಿಟಿ ಶೋಗೆ ಆಡಿಷನ್ ಕೊಡಲು ಹೋದಾಗ ನನ್ನನ್ನು ಗುರುತಿಸಿ ಅವಕಾಶವನ್ನು ನೀಡಿದರು. ನಂತರ ನಿರಂತರವಾಗಿ ನನಗೆ ಡಾನ್ಸ್ ಮಾಡಲು ಅವಕಾಶ ಸಿಕ್ಕಿದೆ. 'ಲಿಟಲ್ ಚಾಂಪ್', 'ಬಾಯ್ಸ್ ವರ್ಸಸ್ ಗರ್ಲ್ಸ್', 'ಗುರು ಶಿಷ್ಯರು' ಮೂರು ಸೀಸನ್ ಮಾಡಿದೆ. ತುಂಬ ಶ್ರಮಪಟ್ಟು ಕೆಲಸ ಮಾಡಿದ್ದೇನೆ. ತೆಲುಗಿನಲ್ಲಿಯೂ ಕೆಲವು ಡಾನ್ಸ್ ಶೋ ನೀಡಿದ್ದು ನನಗೆ ಹೆಮ್ಮೆ ಇದೆ. 'ಕುಣಿಯೋಣು ಬಾರಾ' ಸ್ಪರ್ಧೆಗೆ ಆಯ್ಕೆಯಾದ ಮೇಲೆ ಡಾನ್ಸ್ ಶಾಲೆಯಲ್ಲಿ ಹಗಲಿರುಳು ತಾಲೀಮು ಮಾಡಿದ್ದೇನೆ. ರಾತ್ರಿ ಮಲಗಲು ಮಾತ್ರ ಮನೆಗೆ ಹೋಗುತ್ತಿದ್ದೆ.

◆ **ಬಸ್ ಹತ್ತಿರುವ ಶಾರದಾಳ ಪಯಣ ಎತ್ತ...?**

ಹಳ್ಳಿಯಲ್ಲಿ ಬೆಳೆದ ಹೆಣ್ಣುಮಗಳು ನಾನು. ಹೆಣ್ಣುಮಗು ಆಗಿದೆ ಎಂದು ಹಲುಬಿ ಗಂಡ ನನ್ನನ್ನು ಬಿಟ್ಟು ಹೋಗಿದ್ದಾನೆ. ಈಗ ಮಗು ಬೆಳೆಸುವ ಜವಾಬ್ದಾರಿ ನನ್ನ ಮೇಲಿದೆ. ಏಕಮಾತ್ರ ಪೋಷಕಳಾಗಿ ಮಗಳನ್ನು ಬೆಳೆಸುವ ಜೊತೆ ಗಂಡನನ್ನೂ ಹುಡುಕುತ್ತಿದ್ದೇನೆ. ಗಂಡನನ್ನು ಹುಡುಕಿ ಬೆಂಗಳೂರಿಗೆ ಹೊರಟಿದ್ದೇನೆ. ಮಹಾನಗರಕ್ಕೆ ಬಂದ ಮೇಲೆ ಆಶ್ರಯವನ್ನು ಎಲ್ಲಿ ಪಡೆಯುತ್ತೇನೆ, ನನ್ನ ಜೀವನ ಹೇಗೆ ಕಷ್ಟಗಳನ್ನು ಎದುರಿಸಲು ಅಣಿಗೊಳ್ಳುತ್ತದೆ ಎನ್ನುವುದೇ ಈ ಕಥೆಯ ಕುತೂಹಲದ ಘಟ್ಟ.

◆ **ಕಿರುತೆರೆಯಲ್ಲಿ ತ್ರಿಭಾಷಾ ನಟಿ. ಅನ್ಯ ಭಾಷಾ ನಟನೆಯ ಅನುಭವ ಹೇಗಿತ್ತು?**

ತಮಿಳು, ತೆಲುಗು ಕಿರುತೆರೆಯಲ್ಲಿ ಮಾಡಿದ್ದೇನೆ. ಮತ್ತೀಗ ಕನ್ನಡದಲ್ಲಿ ಮಾಡುತ್ತಿದ್ದೇನೆ. ನಟನೆ ಆರಂಭಿಸಿ ಐದು ವರ್ಷ ಆಯಿತು. ಇದು ನನ್ನ ಐದನೇ ಧಾರಾವಾಹಿ. ಆರಂಭದಿಂದಲೂ ಪ್ರಧಾನ ಪಾತ್ರವನ್ನೇ ನಿರ್ವಹಿಸುತ್ತಿದ್ದೇನೆ. ಚಿಕ್ಕ ವಯಸ್ಸಿನಿಂದ ಹೀರೋಯಿನ್ ಆಗಬೇಕು ಎನ್ನುವ ಬಯಕೆ ಇತ್ತು. ನನ್ನ ಬೇಡಿಕೆ ದೇವರಿಗೆ ತಲುಪಿತೋ ಏನೋ? ನಾಯಕಿಯಾಗಿಯೇ ನಟಿಸುವ ಅವಕಾಶಗಳು ಸಿಕ್ಕಿವೆ. ಮೂರು ಭಾಷಾ ಇಂಡಸ್ಟ್ರಿಯಲ್ಲಿಯೂ ಭಿನ್ನತೆ ಇದೆ. ನಾನು ಅದನ್ನೆಲ್ಲ ಎಂಜಾಯ್ ಮಾಡುತ್ತಲೇ ಕಲಿಯುತ್ತಿದ್ದೇನೆ. ತೆಲುಗು–ತಮಿಳಿನ ನನ್ನ ಪಾತ್ರಕ್ಕೆ ಡಬ್ಬಿಂಗ್ ಕಲಾವಿದರು ಬೇರೆ ಇರುತ್ತಾರೆ. ಕನ್ನಡದಲ್ಲಿ ಲೈವ್ ರೆಕಾರ್ಡ್ ಆಗುತ್ತಿರುತ್ತೆ. ಇಲ್ಲಿ ನಮ್ಮ ಧ್ವನಿಯೇ ನೇರವಾಗಿ ರೆಕಾರ್ಡ್ ಆಗುವುದರಿಂದ ಎಚ್ಚರಿಕೆ ಹೆಚ್ಚು ಬೇಕಾಗುತ್ತದೆ. ಡೈಲಾಗ್ ಹೇಳುವಾಗ ಒಂದು ಪದ ಕೂಡ ಆಚೆ ಈಚೆ ಆಗದಂತೆ ಸರಿಯಾಗಿ ಹೇಳಬೇಕು. ಅನ್ಯ ಭಾಷೆಯಲ್ಲಿ ಡಬ್ಬಿಂಗ್ ಅವಕಾಶ ಇರುವುದರಿಂದ ಆ ವಿಷಯದಲ್ಲಿ ಒಂದಿಷ್ಟು ಅನುಕೂಲತೆ ಇದೆ. ಅಲ್ಲಿ ತುಟಿಗಳ ಚಲನೆ ಮಾಡಿದರೂ ಸಾಕಾಗುತ್ತದೆ. ಶಾರದಾ ಪಾತ್ರವಾಗಿ ಜೋರು ದನಿಯಲ್ಲಿ ಡೈಲಾಗ್ ಹೇಳಲೇಬೇಕಾಗುತ್ತದೆ.

◆ **ಮುಂದಿನ ಗುರಿ ಬಗ್ಗೆ ಏನು ಯೋಚಿಸಿದ್ದೀರಿ?**

ಕಾಲ ಬಂದಂತೆ ಹೋಗಬೇಕು ಎನ್ನುವುದು ನನ್ನ ಜೀವನದ ಪಾಲಿಸಿ. ಯಾವುದನ್ನೂ ಯೋಜನೆ ಹಾಕಿಕೊಂಡು ಮಾಡಲು ಆಗುವುದಿಲ್ಲ. ಈ ಕ್ಷೇತ್ರಕ್ಕೆ ನಾನು ಬಂದು ಐದು ವರ್ಷಗಳಾದರೂ ಮನೆಯಲ್ಲಿ ಖಾಲಿ ಕುಳಿತೇ ಇಲ್ಲ. ನಿರಂತರವಾಗಿ ಕೆಲಸವನ್ನು ಮಾಡುತ್ತಿದ್ದೇನೆ. ಇದು ನನ್ನನ್ನು ಕೈ ಹಿಡಿದು ಮುನ್ನಡೆಸುತ್ತದೆ ಎನ್ನುವ ಖಾತ್ರಿ ಇದೆ. ಮತ್ತೆ ರಿಯಾಲಿಟಿ ಶೋಗೆ ಅವಕಾಶ ಬಂದರೂ ಹೋಗಬೇಕು ಎಂದುಕೊಂಡಿದ್ದೇನೆ.

■ **ರಾಘವೇಂದ್ರ ಕೆ.**